ಸವರ್ಣೀಯರದೇ ಮೇಲುಗೈಯಾದ್ದರಿಂದ, ಪರೀಕ್ಷೆಗಳಲ್ಲಿ ತೇರ್ಗಡೆಯಾಗುವ ಬೌದ್ಧಿಕ ಕಾಯಕದತ್ತ ಈ ತಾಂತ್ರಿಕ ಸಂಸ್ಥೆಗಳು ವಾಲುವುದು ಆಶ್ಚರ್ಯದ ವಿಷಯವೇನೂ ಅಲ್ಲ.

ಎರಡನೇ ಹಂತದಲ್ಲಿ ಐಐಟಿಗಳಲ್ಲಿಯೂ ಆರಕ್ಷಣೆಯ, ಸಾಮಾಜಿಕ ಒಳಗೊಳ್ಳುವಿಕೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಮಂಡಲ ಆಯೋಗದ ವರದಿಯ ನಂತರದ ಹಂತದಲ್ಲಿ ಹಿಂದುಳಿದ ಜಾತಿವರ್ಗಗಳವರಿಗೂ ಈ ಸಂಸ್ಥೆಗಳಲ್ಲಿ ಜಾಗ ಸಿಗುತ್ತದೆ. ಆದರೆ, ಆ ವೇಳೆಗಾಗಲೇ ಐಐಟಿಗಳ ಪ್ರತ್ಯೇಕ ಗುರುತು ಏರ್ಪಾಟಾಗಿಬಿಟ್ಟಿದೆ.

ಅಜಂತಾರ ಪುಸ್ತಕ ಓದಿದಾಗ ನಮ್ಮ ಮನಸ್ಸಿನಲ್ಲಿ ಅನೇಕ ರೀತಿಯ ವಿಚಾರಗಳು ಬರುತ್ತವೆ.

ಒಂದು, ಸರ್ಕಾರಗಳು ಉನ್ನತ ವಿದ್ಯೆಯ ಮೇಲೆ ಖರ್ಚುಮಾಡುವಾಗ, ಶ್ರೇಷ್ಠತೆಯನ್ನು ಪರಿಭಾಷಿಸಿ, ಅವಕ್ಕೆ ಪ್ರತ್ಯೇಕ ಅರ್ಹತಾ ಪರೀಕ್ಷೆ, ಪ್ರತ್ಯೇಕ ಆರ್ಥಿಕ ಸವಲತ್ತು, ಪ್ರತ್ಯೇಕ ಕಾನೂನುಗಳನ್ನು ಮಾಡಿ – ಆಧುನಿಕ ಬ್ರಾಹ್ಮಣಿಕೆಯ ದ್ವೀಪಗಳನ್ನು ಉಂಟುಮಾಡಬೇಕೆ? ಇದರಿಂದ ಅಸಮಾನತೆಯನ್ನು ಕಮ್ಮಿ ಮಾಡುವ ಸರ್ಕಾರದ ಉದ್ದೇಶ ಸೋಲುತ್ತದೆಯೇ? ಇದು ಸಾರ್ವಜನಿಕ ನೀತಿಯ ಜಟಿಲ ಪ್ರಶ್ನೆ. ಆಧುನಿಕ ಜಗತ್ತಿನಲ್ಲಿ ಸಂಶೋಧನೆ, ಅನುಸಂಧಾನಗಳು ಬೇಕಿರುವ ಕಾಲದಲ್ಲಿ ಈ ದ್ವೀಪಗಳು ಬೇಕಾಗಿವೆ. ಆದರೆ, ಅವುಗಳನ್ನು ಯಾವ ಮಟ್ಟದಲ್ಲಿ ಸ್ಥಾಪಿಸಬೇಕು ಹಾಗೂ ಅದಕ್ಕೆ ಆಗಬಹುದಾದ ಖರ್ಚನ್ನು ಇನ್ನೂ ವಿಸ್ತಾರವಾದ ಒಳಗೊಳ್ಳುವಿಕೆಯಿರುವ ಸಂಸ್ಥೆಗಳಲ್ಲಿ ಹೂಡಬಹುದೇ ಎನ್ನುವ ಪ್ರಶ್ನೆಯನ್ನು ಕೇಳಿಕೊಳ್ಳಬೇಕು.

ಎರಡು, ಈ ದ್ವೀಪಗಳನ್ನು ನಿರ್ಮಿಸಿದರೂ ಅದರಲ್ಲಿ ಕೆಲಸ ಮಾಡುವವರ ವೈವಿಧ್ಯತೆಗೆ ನಾವು ಗಮನವನ್ನು ಕೊಡುತ್ತಿದ್ದೇವೆಯೆ? ಅಥವಾ ಒಂದು ರೀತಿಯಿಂದ ಪರಂಪರಾಗತವಾಗಿ ಜಾತಿ, ಮತ್ತು ಹುಟ್ಟಿನಿಂದ ಕೈವಶವಾಗಿರುವ ನಮ್ಮ ವಿಶಿಷ್ಟ ಪ್ರತಿಭೆಗಳನ್ನು ಸೀಮಿತವಾಗಿ ಪೋಷಿಸುವ, ಮಿಕ್ಕ ರೀತಿಯ ಪ್ರತಿಭೆಗಳನ್ನು ಹೊರಗಿಡುವ ಕೆಲಸವನ್ನು ಈ ಸಂಸ್ಥೆಗಳು ಮಾಡುತ್ತಿವೆಯೆ?

ಕಡೆಗೂ ಈ ದ್ವೀಪಗಳು ಹೊಸ ಮತ್ತು ಆಧುನಿಕ ಜಾತಿವ್ಯವಸ್ಥೆಯನ್ನು ಏರ್ಪಡಿಸುತ್ತಿವೆ. ಐಐಟಿಯ, ಐಐಎಂನ ಟೀಷರ್ಟುಗಳನ್ನು ಧರಿಸುವುದು, ಲಾಂಛನಗಳಿರುವ ಬ್ಯಾಗುಗಳನ್ನೂ ಟೋಪಿಗಳನ್ನೂ ಧರಿಸುವುದು ತಮ್ಮ ನವಜಾತಿಯ ಪ್ರತೀಕಗಳನ್ನು ಪ್ರದರ್ಶಿಸುವುದಕ್ಕಲ್ಲದೇ ಬೇರೇನು ಕಾರಣವಿರಬಹುದು? ಇದಕ್ಕೂ, ಹಣೆಯಲ್ಲಿ ವಿಭೂತಿ, ತಿಲಕ ಹೆಗಲ ಮೇಲೆ ಜನಿವಾರ ಧರಿಸುವುದಕ್ಕೂ ಇರುವ ದ್ಯೋತಕದ ಭಿತ್ತಿಗಳಲ್ಲಿ ಯಾವ ಭಿನ್ನತೆಯೂ ಇಲ್ಲ.

ಆದರೆ, ಪರಂಪರಾಗತ ಜಾತಿವ್ಯವಸ್ಥೆಗೂ ಈ ಆಧುನಿಕ ಜಾತಿವ್ಯವಸ್ಥೆಗೂ ಒಂದು ಮೂಲಭೂತ ಭಿನ್ನತೆಯಿದೆ. ಅದನ್ನು ಗುರುತಿಸಿದರೆ ಈ ಆಧುನಿಕ ಜಾತಿವ್ಯವಸ್ಥೆ ಹಿಂದಿನದ್ದಕ್ಕಿಂತ ತುಸು ಉತ್ತಮವೆನ್ನಿಸಬಹುದು. ಪರಂಪರಾಗತ ಜಾತಿವ್ಯವಸ್ಥೆ ಹುಟ್ಟಿನಿಂದ ಬರುತ್ತದೆ. ಆದರೆ, ಈ ಹೊಸ ಜಾತಿವ್ಯವಸ್ಥೆಯಲ್ಲಿ ಪ್ರತಿಭೆ, ಪರಿಶ್ರಮದಿಂದ ಪ್ರವೇಶ ಪಡೆಯುವ ಸಾಧ್ಯತೆಯಿದೆ. ಇಲ್ಲಿ, ಈ ಸಂದರ್ಭದಲ್ಲಿಯೇ ಅಜಂತಾರ ಅಧ್ಯಯನ ನಮ್ಮ ಕಣ್ಣು ತೆರೆಸುವತ್ತ ಕೆಲಸಮಾಡುತ್ತದೆ. ಪ್ರತಿಭೆ, ಪರಿಶ್ರಮದಿಂದ ಪ್ರವೇಶ ಪಡೆಯಬಹುದು ಅನ್ನುವ ಮಾತನ್ನು ನಾವು ಕಂಡಾಗ ಅವರೆಡಕ್ಕೂ ಅನುವಾಗಿ ಪರಂಪರಾಗತ ಜಾತಿವ್ಯವಸ್ಥೆ ನಿಂತಿದ್ದರೆ ನವ ನಿರ್ಮಿತ ಜಾತಿಗೂ ಪರಂಪರಾಗತ ಜಾತಿಗೂ ಯಾವುದೇ ಸ್ಪಷ್ಟ ಭಿನ್ನತೆ ಕಾಣುವುದಿಲ್ಲ. ಹೀಗಾಗಿಯೇ ಯಾವ ರೀತಿಯ ಪ್ರವೇಶ ಪರೀಕ್ಷೆಗಳನ್ನು ನಿರ್ಮಿಸಬೇಕು. ಪ್ರತಿಭೆಯನ್ನು ಯಾವ ರೀತಿಯಲ್ಲಿ ಗುರುತಿಸಬೇಕು, ಭೌತಿಕ ಕಾಯಕವನ್ನು ಪರಂಪರಾಗತವಾಗಿ ಕೈಗೊಳ್ಳುತ್ತಿದ್ದ ಜಾತಿಗಳವರಿಗೆ ಇಲ್ಲಿ ತಮ್ಮಲ್ಲಿ ಅಡಕವಾಗಿರುವ ಪ್ರತಿಭೆಯ ಮೂಲಕ ಪ್ರವೇಶ ನೀಡುವ ಮಾರ್ಗಗಳೇನು ಎನ್ನುವ ವಿಚಾರಗಳನ್ನು ಮಥಿಸಬೇಕಾಗುತ್ತದೆ. ಇಲ್ಲವಾದರೆ ನಾವು ನಿರ್ಮಿಸುತ್ತಿರುವ ನವಜಾತಿಗಳು ಹಳೇ ಜಾತಿಗಳ ಹೊಸರೂಪ ತಾಳಬಹುದು.

ಮಂಡಲ ಆಯೋಗದ ಶಿಫಾರಸ್ಸಿನಿಂದ ಉಂಟಾದ ಆರಕ್ಷಣೆಯಿಂದಾಗಿ ಐಐಟಿಗಳ ವೈವಿಧ್ಯ ಹೆಚ್ಚಿತು ಎನ್ನುವ ಮಾತನ್ನು ಅಜಂತಾ ತಮ್ಮ ವಾದದಲ್ಲಿ ಹೊರತರುತ್ತಾರೆ. ಆದರೆ, ಪ್ರವೇಶಕ್ಕೆ ಇರಬೇಕಾದ ಮಾರ್ಗ ಬದಲಾಗಲಿಲ್ಲ. ಮೂಲಭೂತವಾಗಿ